

# ಕಾಲೇಜು ಕುವರಿಯರ ಫ್ಯಾಷನ್ ಮಂತ್ರ



■ **ಅರ್ಪಿತರಾಣಿ ಎ.ಎಸ್.**

ಕಾಲೇಜು ಜೀವನ ಎನ್ನುವುದು ಕೇವಲ ಪರೀಕ್ಷೆ ಮತ್ತು ಅಂಕಪಟ್ಟಿಗಳಿಗಾಗಿ ನಡೆಸುವ ಓಟವಲ್ಲ, ಅದು ಕನಸುಗಳ ಕಾಮನಬಿಲ್ಲು ಮೂಡುವ ಜ್ಞಾನಲೋಕ. ಅಲ್ಲಿ ಕೇವಲ ಪಠ್ಯಪುಸ್ತಕಗಳ ಅಕ್ಷರಗಳಿರುವುದಿಲ್ಲ, ಬದಲಾಗಿ ಬದುಕನ್ನು ರೂಪಿಸುವ ಹತ್ತಾರು ಬಣ್ಣದ ವೇದಿಕೆಗಳಿರುತ್ತವೆ. ಅಕ್ಷರಗಳ ಕಲರವದ ಜೊತೆಗೆ ಬಣ್ಣ ಬಣ್ಣದ ಉಡುಪುಗಳ ಸಂಭ್ರಮವೂ ಇಲ್ಲಿರುತ್ತದೆ. ಪ್ರತಿಯೊಬ್ಬ ಯುವತಿಯೂ ತಾನು ಕ್ಯಾಂಪಸ್‌ನಲ್ಲಿ ಅಚ್ಚುಕಟ್ಟಾಗಿ, ಆತ್ಮವಿಶ್ವಾಸದಿಂದ ಕಾಣಿಸಿಕೊಳ್ಳಬೇಕೆಂದು ಬಯಸುತ್ತಾಳೆ. ಈ ಸುಂದರ ಹಂತದಲ್ಲಿ ಆಕೆಯ 'ಔಟ್‌ಫಿಟ್' ಅಥವಾ ಉಡುಗೆ ಪ್ರಮುಖ ಪಾತ್ರ ವಹಿಸುತ್ತದೆ. ಭವಿಷ್ಯದ ಕನಸುಗಳನ್ನು ಬೆನ್ನಟ್ಟುವ ಹೊತ್ತಲ್ಲೇ ಟ್ರೆಂಡ್‌ಗೆ ತಕ್ಕಂತೆ ತನ್ನನ್ನು ತಾನು ಸಿಂಗರಿಸಿಕೊಳ್ಳಲು ಸೃಜನಾತ್ಮಕ ಪ್ರಯತ್ನ ನಡೆಸುತ್ತಾಳೆ.

ಹೊಸ ಹೊಸ ಆಲೋಚನೆಗಳನ್ನು ಹೊತ್ತು ಲೋಕವನ್ನೇ ಬೆರಗುಗಣ್ಣಿನಿಂದ ನೋಡುತ್ತಾ ಕಾಲೇಜು ಮೆಟ್ಟಿಲೇರುವ ಯುವತಿಯರಿಗೆ ನಿತ್ಯವು ವಿನೂತನವಾಗಿ ಕಾಣುವ ಬಯಕೆ. ತಮ್ಮ ಉಡುಗೆ–ತೊಡುಗೆ ನೋಟದಿಂದಲೇ ಎಲ್ಲರನ್ನು ತನ್ನತ್ತ ಸೆಳೆಯುವ ಬಯಕೆ. ಆದರೆ, ಇಂದಿನ ಯುವತಿಯರಿಗೆ ಪ್ರತಿದಿನ ಹೊಸ ರೀತಿಯಲ್ಲಿ